ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಮಂಡ್ಯ ತಾಲ್ಲೂಕಿನಲ್ಲಿ 7ಪೋಲೀಸ್ ಠಾಣೆಗಳಿವೆ. ಪೋಲೀಸ್ ಠಾಣೆಗಳ ಕೊರತೆಯಾಗಲಿ, ಸಿಬ್ಬಂದಿಯ ಕೊರತೆಯಾಗಲಿ ಇಲ್ಲ.

ಆ) ಉದ್ಭವಿಸುವುದಿಲ್ಲ.

ಮಂಡ್ಯ ಜಿಲ್ಲೆಯಲ್ಲಿನ ದೇವಸ್ಥಾನಗಳ ಅಭಿವೃದ್ಧಿಗಳ ಕುರಿತು

2662 (3430) ಶ್ರೀ ಆತ್ಮಾನಂದ ಎಂ. ಎಸ್. (ಮಂಡ್ಯ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮಂಡ್ಯ ಜಿಲ್ಲೆಯಲ್ಲಿನ ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯದ ಮತ್ತು ಮೇಲುಕೋಟೆಯ ಚೆಲುವನಾರಾಯಣ ಸ್ವಾಮಿ ದೇವಾಲಯಗಳು ಪುರಾಣ ಪ್ರಸಿದ್ಧ ಹಾಗೂ ಚಾರಿತ್ರಿಕ ಹಿನ್ನೆಲೆಯುಳ್ಳದಾಗಿರುವುದನ್ನು ಸರಕಾರ ಗಮನಿಸಿದೆಯೇ?

2) ಇವುಗಳನ್ನು ಅಭಿವೃದ್ಧಿ ಪಡಿಸಲು ಸರಕಾರವು ಎನಾದರೂ ಕ್ರಮ ಕೈ ಗೊಂಡಿದಿಯೇ (ವಿವರವನ್ನು ಒದಗಿಸುವುದು)

ಶ್ರೀ ಬಾಬುರಾವ್ ಚಿಂಚನಸೂರ (ಮುಜರಾಯಿ ರಾಜ್ಯ ಸಚಿವರು) :

1) ಹೌದು

2) ''ಹೌದು'' ಶ್ರೀ ರಂಗಪಟ್ಟಣದ ಶ್ರೀ ರಂಗನಾಥಸ್ವಾಮಿ ದೇವಾಲಯಕ್ಕೆ ಸಂಬಂಧಿಸಿದಂತೆ ಕೆಲವು ಅಭಿವೃದ್ಧಿ ಕಾರ್ಯಕೈಗೊಳ್ಳಲು ಉದ್ದೇಶಿಸಿದ್ದು, ಅವುಗಳ ವಿವರ ಈ ಕೆಳಕಂಡಂತಿದೆ.

1) ಶ್ರೀ ರಂಗನಾಥಸ್ವಾಮಿ ದೇವಾಲಯದ ಮುಂಭಾಗದ ಮೈದಾನ ಪ್ರದೇಶದಲ್ಲಿ ರೂ. 5.00 ಲಕ್ಷ ಅಂದಾಜು ವೆಚ್ಚದಲ್ಲಿ ಉದ್ಯಾನವನ ನಿರ್ಮಾಣ

2) ರೂ. 25.00 ಲಕ್ಷ ವೆಚ್ಚದಲ್ಲಿ ಸುಸಜ್ಜಿತವಾದ ವಾಣಿಜ್ಯ ಸಂಕೀರ್ಣ ನಿರ್ಮಾಣ

3) ರೂ.4.00 ಲಕ್ಷ ವೆಚ್ಚದಲ್ಲಿ ಭಕ್ತಾಧಿಗಳ ಅನುಕೂಲಕ್ಕಾಗಿ ಸುಸಜ್ಜಿತವಾದ ಶೌಚಾಲಯ ನಿರ್ಮಾಣ.

4) ರೂ. 3.00ಲಕ್ಷ ವೆಚ್ಚದಲ್ಲಿ ಭಕ್ತಾಧಿಗಳ ವಾಹನ ನೀಲುಗಡೆ ನಿಲ್ದಾಣ ನಿರ್ಮಾಣ,

5) ರೂ. 30.00ಲಕ್ಷ ವೆಚ್ಚದಲ್ಲಿ ಕಲ್ಯಾಣ ಮಂಟಪ ಕಾಮಗಾರಿ ಪ್ರಗತಿಯ ಹಂತದಲ್ಲಿದೆ.

ಇವುಗಳಲ್ಲಿದೆ ಸದರಿ ದೇವಾಲಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಪ್ರಾಚ್ಯ ವಸ್ತು ಇಲಾಖೆಯಿಂದಲೂ ಸಹ ದೇವಾಲಯದ ರಾಜಗೋಪುರ, ವಿಮಾನ ಗೋಪುರ ರಿಪೇರಿ ಬಣ್ಣ ಹಾಗೂ ಅಗತ್ಯ ಕಾಮಗಾರಿ ಕೈಗೊಳ್ಳಲಾಗಿರುತ್ತದೆ.